ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/56/ಅಕಾನಿ-ಮಂಜೂರು/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-560001.
ದಿನಾಂಕ: 23.03.2023

## ತಿದ್ದುಪಡಿ

ವಿಷಯ: ನ್ಯಾಕ್ ಪ್ರಕ್ರಿಯೆ ಪೂರೈಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ನ್ಯಾಕ್ ಸಮನ್ವಯಾಧಿಕಾರಿಗಳಿಗೆ 'ಅನ್ಯಕಾರ್ಯ ನಿಮಿತ್ತ ಮಂಜೂರು ಮಾಡವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ಶೈವಿ/25/ಸುತ್ತೋಲೆ/2010-11 ದಿನಾಂಕ:22.12.2010.
2. ನೋಡಲ್ ಅಧಿಕಾರಿಗಳು ರಾಜ್ಯ ಗುಣಮಟ್ಟ ಭರವಸಾ ಕೋಶ, ರವರ ಪತ್ರದ ಸಂಖ್ಯೆ:ಕಾಶಿಇ/ನ್ಯಾಕ್/08/ಸುತ್ತೋಲೆ/2021-22 ದಿನಾಂಕ:21.03.2023.
3. ಇದೇ ಸಮಸಂಖ್ಯೆಯ ದಿನಾಂಕ: 21.03.2023 ರ ಅಧಿಕೃತ ಜ್ಞಾಪನ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3) ರ ಅಧಿಕೃತ ಜ್ಞಾಪನದಲ್ಲಿ ಕಳೆದ ಎರಡು ವರ್ಷಗಳಿಂದ ನ್ಯಾಕ್ ಮೌಲ್ಯಮಾಪನ /ಮರು ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಟ್ಟು, ಪ್ರಕ್ರಿಯೆಯನ್ನು ಪೂರೈಸಿ, ವಿವಿಧ ಶ್ರೇಣಿಗಳನ್ನು ಪಡೆದಿರುವ 289 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಒಂದು ಮಹತ್ತರ ಐತಿಹಾಸಿಕ ದಾಖಲೆಯನ್ನೇ ನಿರ್ಮಿಸಿರುತ್ತದೆ. ಕಾಲೇಜುಗಳ ಶ್ರಮವನ್ನು ಗುರುತಿಸಿ, ಅಭಿನಂದಿಸಿ, ಮತ್ತಷ್ಟು ಪ್ರೋತ್ಸಾಹ ನೀಡಲು ಅಭಿನಂದನಾ ಪತ್ರಗಳನ್ನು ವಿತರಿಸುವ ಬಗ್ಗೆ ಮಾನ್ಯ ಆಯುಕ್ತರು ತೀರ್ಮಾನ ಕೈಗೊಂಡಿದ್ದು, ದಿನಾಂಕ: 24-03-2023 ರಂದು ಮಧ್ಯಾಹ್ನ 1.00 ಗಂಟೆಗೆ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ <u>ಜ್ಞಾನಜ್ಯೋತಿ ಸಭಾಂಗಣ</u>ದಲ್ಲಿ "ಅಭಿನಂದನಾ ಸಮಾರಂಭ"ವನ್ನು ಹಮ್ಮಿಕೊಳ್ಳಲಾಗಿರುವ ಬಗ್ಗೆ ಪ್ರಸ್ತಾಪಿಸಿದ್ದು, **<u>ಸದರಿ ದಿನದಂದು ವೇಳಾಪಟ್ಟಿಯನ್ನು ತಿದ್ದುಪಡಿ ಮಾಡಿ, ಮಧ್ಯಾಹ್ನ 1.00 ಗಂಟೆಗೆ ಬದಲಾಗಿ ಬೆಳಿಗ್ಗೆ 11.00 ಗಂಟೆಗೆ ಕಡ್ಡಾಯವಾಗಿ ಸಮಾರಂಭದಲ್ಲಿ ಭಾಗವಹಿಸಲು ಸೂಚಿಸಲಾಗಿದೆ</u>** ಹಾಗೂ ಭಾಗವಹಿಸಿದ ಸಿಬ್ಬಂದಿಗೆ ಸರ್ಕಾರದ/ಇಲಾಖೆಯ ವತಿಯಿಂದ ಯಾವುದೇ ಭತ್ಯೆಗಳಿಲ್ಲದೆ ಒಂದು ದಿನ ಅನ್ಯಕಾರ್ಯನಿಮಿತ್ತ ಮಂಜೂರು ಮಾಡಲಾಗಿದೆ.

For 23/03/23
ಕಾಲೇಜು ಶಿಕ್ಷಣ ನಿರ್ದೇಶಕರು

<u>ಇವರಿಗೆ:</u>
1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ.
2. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ಐಕ್ಯೂಎಸಿ ಸಂಚಾಲಕರುಗಳಿಗೆ.
3. ನೋಡಲ್ ಅಧಿಕಾರಿಗಳು ರಾಜ್ಯ ಗುಣಮಟ್ಟ ಭರವಸಾ ಕೋಶ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
4. ಕಛೇರಿ ಪ್ರತಿ.
5) ಮಾಹಿ. ಒ ತಂತ್ರಜ್ಞಾನ ಅಧಿಕಾರಿಗಳು. ಕೇಂದ್ರ ಕಛೇರಿ - ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಪಡಿಸಲು ತಿಳಿಸಲಾಗಿದೆ.